ಹಾಗೆ ನೋಡಿದರೆ ಇದರಲ್ಲಿ ಅಚ್ಚರಿಪಡುವ ಸಂಗತಿಯೇನೂ ಇಲ್ಲ. ಭಾರತೀಯ ಪರಂಪರೆಯಲ್ಲಿ ಶಿಶ್ನಾರಾಧನೆ ಅಸಂಗತವೂ ಅಲ್ಲ. ಜೋಕುಮಾರ ಸ್ವಾಮಿಯನ್ನೇ ತೆಗೆದುಕೊಳ್ಳಿ, ಪೂಜೆಗೊಳ್ಳುವ ಆತನ ಪ್ರತಿಮೆಯಲ್ಲಿ ಲಿಂಗದ ಗಾತ್ರಕ್ಕೇ ಹೆಚ್ಚಿನ ಆದ್ಯತೆ. ಹುಡುಕುತ್ತ ಹೋದರೆ ಜಗತ್ತಿನ ಹಲವು ದೇಶಗಳಲ್ಲಿ ಶಿಶ್ನಪೂಜೆಯ ವಿವಿಧ ರೂಪಗಳು ನಮಗೆ ಸಿಕ್ಕಾವು. ಜಪಾನಿನ ಕವಾಸಾಕಿಯಲ್ಲಿ ಬೃಹದಾಕಾರದ ಪುರುಷ ಜನನಾಂಗದ ಲೋಹದ ಪ್ರತಿಮೆ ಹೊತ್ತು ಬೀದಿಗಳಲ್ಲಿ ಮೆರವಣಿಗೆ ಹೋಗುವುದು ('ಲೋಹದಂತ ಶಿಶ್ನದ ಹಬ್ಬ' ಎಂದೇ ಹೆಸರು ಅದಕ್ಕೆ), ಥಾಯ್ಲೆಂಡ್‌ನಲ್ಲಿ ಭಕ್ತರೆಲ್ಲ ವಿವಿಧ ಗಾತ್ರದ ಕಟ್ಟಿಗೆಯ ಶಿಶ್ನವನ್ನು ಕೊಂಡು ತಂದು ಒಂದೆಡೆ ರಾಶಿ ಹಾಕಿ ಸಾಮೂಹಿಕವಾಗಿ ಪೂಜಿಸುವುದು, ದಕ್ಷಿಣ ಕೊರಿಯಾದಲ್ಲಿ ಶಿಶ್ನರೂಪಿ ಮೇಣದಬತ್ತಿಯನ್ನು ಕತ್ತಲಲ್ಲಿ ಉರಿಸಿ ಆರಾಧಿಸುವುದು... ಹೀಗೆ ಒಂದೊಂದು ಆಚರಣೆಯೂ ಅನನ್ಯ, ವೈವಿಧ್ಯ.

ಇವುಗಳಿಗೆ ಹೋಲಿಸಿದರೆ ಭೂತಾನ್ ದೇಶದ ಶಿಶ್ನಾರಾಧನೆ ಸಂಪೂರ್ಣ ಭಿನ್ನ ಹಾಗೂ ವೈಶೇಷಿಕವಾದದ್ದು. ಉಳಿದೆಡೆಯಂತೆ ವರ್ಷದ ಯಾವುದೋ ಒಂದು ದಿನದ ಆಚರಣೆ, ಅಥವಾ ಎಲ್ಲೋ ಒಂದು ದೇವಸ್ಥಾನದಲ್ಲಿ ನಡೆಯುವ ಅಂಗಪೂಜೆಗೆ ಸೀಮಿತವಾಗಿಲ್ಲ ಅವರ ಶಿಶ್ನಪ್ರೀತಿ. ಅಲ್ಲಿಯ ಅನೇಕ ಮನೆಗಳ ಗೋಡೆಯಮೇಲೆ, ಹಲವು ಬಣ್ಣ–ಗಾತ್ರದ, ವಿವಿಧ ಕುಸುರಿ ಕಲ್ಪನೆಗಳ ಶಿಶ್ನದ ಕಲಾತ್ಮಕ ಪೇಂಟಿಂಗ್‌ಗಳನ್ನು ಕಾಣಬಹುದು ನಾವು. ಮನೆಗೆ ನೇತು ಹಾಕುವ ದೃಷ್ಟಿಗೊಂಬೆಯೂ ಶಿಶ್ನಕ್ಕೆ ಕಣ್ಣು ಮೂಗು ಬರೆದ ವಸ್ತುವೇ ಆಗಿದೆ ಅಲ್ಲಿ. ಕೆಲವು ಹೋಟೆಲಿನ ವೆಲ್‌ಕಮ್ ಬೋರ್ಡು, ದಾರಿ ತೋರಿಸುವ ಸೈನ್ ಬೋರ್ಡುಗಳು ಶಿಶ್ನಾಕಾರದ ಹಲಗೆ/ತಗಡಿನ ಮೇಲೆ ಬರೆದಿರುವಂಥವು. ಅಷ್ಟೇ ಏಕೆ, ಕೀ ಚೈನುಗಳು, ಮಹಿಳೆಯರ ಕುತ್ತಿಗೆ ಸರದ ಲಾಕೆಟ್ಟು, ಪೆನ್ನಿನ ಕ್ಯಾಪು, ಮಕ್ಕಳ ಆಟಿಕೆ, ಪೇಪರ್ ವೈಟ್, ಬಾಗಿಲ ಹ್ಯಾಂಡಲ್ಲು – ಹೀಗೆ ಶಿಶ್ನವನ್ನು ವಿಭಿನ್ನ ರೂಪದಲ್ಲಿ ಕಲ್ಪಿಸಿ, ಬಳಸಬಹುದಾದ ಯಾವ ವಸ್ತುಗಳನ್ನೂ ಅವರು ಬಿಟ್ಟಿಲ್ಲ. ಇವು ಸಿಗದ ಅಂಗಡಿಯೇ ಇಲ್ಲವಲ್ಲಿ.

ಹಾಗಂತ, ಪುರುಷ ಜನನಾಂಗಕ್ಕೆ ದೇವರ ಸ್ಥಾನ ಕಲ್ಪಿಸಿ ಗುಡಿಯಲ್ಲಿಟ್ಟು ಪೂಜಿಸುವುದಿಲ್ಲ ಅವರು. ತಮ್ಮ ನಿತ್ಯ ಬಳಕೆಯ ಒಂದಿಲ್ಲೊಂದು ವಸ್ತುವನ್ನು ಶಿಶ್ನರೂಪಿಯಾಗಿಸಿ ಅತಿ ಸಹಜವೆಂಬಂತೆ ಸದಾ ತಮ್ಮ ಜೊತೆಯಲ್ಲಿ ಇಟ್ಟುಕೊಳ್ಳುವುದು ಅವರ ರೂಢಿ. ನಗರ ಪ್ರದೇಶಕ್ಕಿಂತಲೂ ಭೂತಾನಿನ ಗ್ರಾಮೀಣ ಭಾಗದಲ್ಲಿ ಈ ಪದ್ಧತಿ ವ್ಯಾಪಕವಾಗಿದೆ. ಪುನಾಖಾ ಎನ್ನುವ ಪ್ರದೇಶದ ಕೆಲ ಹಳ್ಳಿಗಳಂತೂ ಸರ್ವಂ ಶಿಶ್ನಮಯಂ ಎನ್ನುವ ಮಟ್ಟಗಿವೆ.

ಈ ಒಂದು ವಿಭಿನ್ನ ಸಂಪ್ರದಾಯದ ಹಿನ್ನೆಲೆ ಹುಡುಕುತ್ತ ಹೊರಟ ನನಗೆ ಸಿಕ್ಕ ಕಥೆಗಳು ಹಲವು. ಶಿಶ್ನವನ್ನು ಅಲ್ಲಿಯ ಜನ ಅದೃಷ್ಟ, ಫಲವತ್ತತೆಯ ಸಂಕೇತ ಎಂದು ನಂಬುತ್ತಾರೆ. ಅದು ದುಷ್ಟ ಶಕ್ತಿಗಳಿಂದ ಅವರನ್ನು ಕಾಪಾಡುವ ಪರಿಕರವೂ ಹೌದು. ಹದಿನೈದನೇ ಶತಮಾನದಲ್ಲಿ, 'ಮನುಷ್ಯನ ಸಂತೋಷ ಅಡಗಿರುವುದು ಆತನ ಸೊಂಟದ ಕೆಳಗೆ' ಎಂದು ನಂಬಿ, ಅದನ್ನು ಪಾಲಿಸಿ, ಇತರರಿಗೂ ಬೋಧಿಸಿದ ಬೌದ್ಧ ಗುರುವೊಬ್ಬ ಭೂತಾನ್ ದೇಶ ಈ ಸಂಸ್ಕೃತಿಯನ್ನು ಅಪ್ಪಿಕೊಳ್ಳಲು ಮೂಲ ಕಾರಣ. ಆ ಬೌದ್ಧ ಗುರು ತನ್ನ ಶಿಶ್ನದಿಂದ ರಾಕ್ಷಸಿಯೊಬ್ಬಳನ್ನು ಬಡಿದು ಕೊಂದ ವೃತ್ತಾಂತವಿದೆ. ಆತ ಯಾವುದೇ ಸಭೆ ಸಮಾರಂಭಗಳಿಗೆ ಹೋದರೂ ತನ್ನ ಗುಪ್ತಾಂಗಕ್ಕೆ ರಿಬ್ಬನ್ ಕಟ್ಟಿಸಿಕೊಳ್ಳುತ್ತಿದ್ದನಂತೆ. ಅದರ ಪ್ರತೀಕವೆಂಬಂತೆ ಅತಿಥಿಗಳ ಕೊರಳಿಗೆ ರಿಬ್ಬನ್ ಕಟ್ಟಿ ಸ್ವಾಗತಿಸುವ ಪರಿಪಾಠ ಇವತ್ತಿಗೂ ಭೂತಾನಿನಲ್ಲಿ ಚಾಲ್ತಿಯಲ್ಲಿದೆ.

ಪುರಾಣೇತಿಹಾಸಗಳು ಏನೇ ಇರಲಿ, ಅಲ್ಲಿಯ ಈ ಆಚಾರದ ಹಿಂದಿನ ಉದ್ದೇಶವೇನಿದ್ದಿರಬಹುದೆಂಬ ಕುತೂಹಲ ನನಗೆ. ಜಗತ್ತಿನ ಹಲವು ಭೂಭಾಗದಲ್ಲಿ ಚಾಲ್ತಿಯಲ್ಲಿರುವ ಶಿಶ್ನಾರಾಧನೆಯ ಹಿನ್ನೆಲೆಯನ್ನು ಪರಾಮರ್ಶಿಸದೇ ಭೂತಾನಿನ ಈ ಸಂಸ್ಕೃತಿಯನ್ನು ಅವಲೋಕಿಸಲು ಸಾಧ್ಯವಿಲ್ಲವಷ್ಟೇ. ನಮ್ಮ ಪುರಾತನರು ನಮಗಿಂತಲೂ ಆಧುನಿಕವಾಗಿದ್ದರು. ಪ್ರಕೃತಿಗೆ ಹತ್ತಿರವಿದ್ದರು. ಪ್ರಾಕೃತಿಕವಾದ ಯಾವುದೇ ಸಂಗತಿಯನ್ನು ಮುಚ್ಚಿಡುವುದರಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಲೈಂಗಿಕತೆ ಕೂಡಾ ಅದೇ ಸಾಲಿಗೆ ಸೇರುವಂಥದ್ದು ತಾನೆ? ಅದನ್ನು